





(4ನೇ ಪುಟದಿಂದ)

ಇವು ನೀರನ್ನೇ ಹೀರಿ ಬದುಕುತ್ತವೆ. ಹೀರಿದ ನೀರನ್ನು ಭಾಷ್ಪವಿಸರ್ಜನೆ ಮಾಡುವುದರ ಮೂಲಕ ಜಲನಾಶದೊಂದಿಗೆ ಜಾಗವನ್ನೂ ಬಂಜರು ಮಾಡುತ್ತದೆ. ನೀರು ಖಾಲಿಯಾದ ನಂತರ ಮಣ್ಣನ್ನು ಆಕ್ರಮಿಸುವ ಇದರ ಬೇರುಗಳು ಮಣ್ಣಿನ ಸತ್ವವನ್ನು ಸಂಪೂರ್ಣ ನಾಶ ಮಾಡುತ್ತವೆ. ಜೊತೆಗೆ ನೀರನ್ನು ಕೆಸರು ಮಾಡುತ್ತಾ ಹೋಗಿ ಕೆರೆ ಅಥವಾ ಬಾವಿಯನ್ನು ಹೂಳು ತುಂಬುವಂತೆ ಮಾಡುವುದರಲ್ಲಿ ಈ ಸಸ್ಯದ್ದು ಎತ್ತಿದ ಕೈ. ಕೆರೆಗಳಲ್ಲಿ ಇದು ಬೆಳೆಯುತ್ತಾ ಕೆರೆ ತುಂಬಾ ಹರಡಿತೆಂದರೆ ನೆಲದಂತೆ ಕಾಣುವುದರಿಂದಾಗಿ ಸಾಕುಪ್ರಾಣಿಗಳು ಬಿದ್ದು ಅಪಾಯಕ್ಕೆ ಒಳಗಾಗುವುದು ಹೆಚ್ಚು.

## ಔಷಧೀಯ ಗುಣ:

ಇದೆಲ್ಲದರ ನಡುವೆ ಈ ಗಿಡಕ್ಕೆ ಔಷಧೀಯ ಗುಣಗಳಿರುವುದೂ ಸುಳ್ಳಲ್ಲ. ರಕ್ತದೊತ್ತಡ ನಿಯಂತ್ರಣದಲ್ಲಿ ಇಡಲು ಇದನ್ನು ಬಳಸಬಹುದು ಎಂದು ಪ್ರಯೋಗಗಳಿಂದ ಸಾಬೀತಾಗಿದೆ. ಬ್ಯಾಕ್ಟೀರಿಯಾಗಳ ಬೆಳವಣಿಗೆಯನ್ನು ಕುಂಠಿತಗೊಳಿಸುವ ಶಕ್ತಿಯೂ ಇದಕ್ಕಿದೆ. ತಿಗಣೆ ಜಾತಿಗೆ ಸೇರಿದ ಕೀಟಗಳು ಇರುವ ಜಾಗದಲ್ಲಿ ಈ ಸಸ್ಯವನ್ನು ಬೇರು ಸಮೇತ ಹಾಕಿದರೆ ಅದರ ವಾಸನೆಗೆ ಕೀಟಗಳು ಅಮಲು ಬಂದು ಬೀಳುತ್ತವೆ ಎಂಬುದನ್ನು ತಂಜಾವೂರಿನ ಜೈಲೊಂದರಲ್ಲಿ ನಡೆಸಿದ ಪ್ರಯೋಗದಲ್ಲಿ ಕಂಡುಕೊಳ್ಳಲಾಗಿದೆ.

ಈ ಸಸ್ಯವನ್ನು ಒಣಗಿಸಿ ಸುಟ್ಟು ಹೊಗೆ ಹಾಕಿದರೆ ಸೊಳ್ಳೆ, ನುಸಿಗಳಿಗೆ ರಾಮಬಾಣವಾಗುತ್ತದೆ ಎಂದು ಸಂಶೋಧನಾ ದಾಖಲೆಗಳು ಹೇಳುತ್ತವೆ. ಆದರೆ ಬಯೋಗ್ಯಾಸ್ ಬಳಕೆಗೆ ಸಂಬಂಧಿಸಿದ ಪ್ರಯೋಗಗಳು ಹಲವು ಬಾರಿ ನಡೆದಿದ್ದು, ಅನಿಲ ತಯಾರಿಕೆ ಇದು ಯೋಗ್ಯವಲ್ಲ ಎಂಬುದಾಗಿಯೂ ಸಾಬೀತಾಗಿದೆ. ಮೂಲತಃ ಅಂತರಗಂಗೆ ಸಸ್ಯಕ್ಕೆ ಸಂಸ್ಕೃತದ ಹೆಸರಿದ್ದು ಭಾರತದ ಸಸ್ಯ ಪ್ರಭೇದವೆನ್ನಲಾಗುತ್ತಿದೆ. ಆದರೆ ಇದು ಉಷ್ಣವಲಯದ ಪ್ರದೇಶಗಳಲ್ಲಿ ಹೆಚ್ಚಾಗಿ ಬೆಳೆಯುತ್ತಿದ್ದು, ಈ ಸಸ್ಯವನ್ನು ಸ್ವೀಡಿಶ್‌ನ ಕೆರೋಲಸ್ ಲಿನೆಯಸ್ ಎಂಬ ವಿಜ್ಞಾನಿ ಮೊದಲು ಕಂಡುಹಿಡಿದ.

ಈ ಸಸ್ಯವನ್ನು ನೀರಿನಿಂದ ತೆಗೆದು ಒಂದು ವರ್ಷಗಳ ಕಾಲ ನೀರು ತಾಗದಂತೆ ಇಟ್ಟರೆ ಮಾತ್ರ ಸಾಯುತ್ತವೆ. ಮಧ್ಯದಲ್ಲಿ ಒಂದು ತೊಟ್ಟು ನೀರು ಸಿಕ್ಕಿದರೂ ಮತ್ತೆ ಬದುಕುವ ವಿಚಿತ್ರ ಶಕ್ತಿ ಈ ಅಂತರ ಗಂಗೆಗೆ ಇರುವುದರಿಂದಲೇ ಇದೊಂದು ಪೈಶಾಚಿಕ ಜಲ ಸಸ್ಯವಾಗಿದೆ. ಇಂದು ಎಲ್ಲೆಡೆ ವ್ಯಾಪಿಸಿಕೊಂಡು ಕೃಷಿಕರಿಗೆ ದೊಡ್ಡ ತಲೆನೋವಾಗಿ ಪರಿಣಮಿಸಿದೆ.